ಕುಸ್ತಿ ಪಟುಗಳು ಇದ್ದಾರೆ .ಆದರೆ ಅವರಿಗೆ ಯಾರ ಭಯವೋ ಗೊತ್ತಿಲ್ಲ. ಅವರ ಕಥೆಯನ್ನು ಓದುತ್ತಿರಬೇಕಾದರೆ ಬಹಳ ಒಳ್ಳೆಯ ಕುಸ್ತಿ ಪಟು ಇದ್ದರು. ಬಹಳ ಸಂಭಾವಿತರು. ಆ ಸಂಭಾವಿತನ ನೋಡಿಯೇ ಅವರಿಗೆ ಹೆಣ್ಣು ಕೊಟ್ಟರು ಎನ್ನುವ ಈ ಎಲ್ಲಾ ವಿವರವನ್ನು ನಾನು ಓದಿದ್ದೆ. ಆದರೆ ಈ ಕುಸ್ತಿ ಪಟುವಿಗೆ ಈಗ... ಎದುರಿಸುತ್ತಿರುವವರು ಯಾರು ಅಂತ ಗೊತ್ತಾಗುತ್ತಿಲ್ಲ. ದಯಮಾಡಿ ಆ ಬಗ್ಗೆಯೂ ವಿವರವನ್ನು ಕೊಡಬೇಕು ಅಂತ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ. ಅವರು ಕೇಳಿರತಕ್ಕಂಥ ವಿವರಗಳಿಗೆ ಪತ್ರವನ್ನು ವೈಯಕ್ತಿಕವಾಗಿ ಬರೆದು ತಿಳಿಸಿಕೊಡುತ್ತೇನೆ. ಆ ಪತ್ರದಲ್ಲಿ ತಾವು ಕೇಳತಕ್ಕಂಥ ಎಲ್ಲಾ ವಿವರಗಳನ್ನು ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ : 176 (2641) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ : 177 (2843) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂಖ್ಯೆ: 2635

ಸದಸ್ಯರ ಹೆಸರು (ಚಾಮರಾಜನಗರ) ; **ಶ್ರೀ ವಾಟಾಳ್ ನಾಗರಾಜ್**

ಉತ್ತರಿಸುವವರು : **ಶ್ರೀ ಪಿ.ಜಿ.ಆರ್. ಸಿಂಧ್ಯ** (ಬೃಹತ್ ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು)

ಕ್ರ.ಸಂ. ಪ್ರಶ್ನೆ

ಅ. ರಾಜ್ಯಕ್ಕೆ ಹೊರಗಡೆಯಿಂದ ಬಂದಿರುವ ಖಾಸಗಿ ಕಾರ್ಖಾನೆಗಳು ಎಷ್ಟು ?

ಉತ್ತರ

ರಾಜ್ಯಕ್ಕೆ ಹೊರಗಡೆಯಿಂದ ಬಂದ ಉದ್ಯಮಿಗಳಿಗೆ ಸಂಬಂಧಿಸಿದಂತೆ ದಿನಾಂಕ 1–4–2003 ರಿಂದ 28–2–2005ರ ಅವಧಿಯಲ್ಲಿ ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ ರೂ 32.399.34 ಕೋಟಿ ಬಂಡವಾಳ ಹೂಡಿಕೆಯ 28 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಅದೇ ರೀತಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯಿಂದ ರೂ. 2044.23 ಕೋಟಿ ಬಂಡವಾಳ ಹೂಡಿಕೆಯ 84 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಕ್ರ.ಸಂ. ಪ್ರಶ್ನೆ

ಆ. ಈ ಕಾರ್ಖಾನೆಗಳು ಯಾವುವು ವಿವರ ನೀಡುವುದು ?

ಉತ್ತರ

ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ ಅನುಮೋದಿತ ಯೋಜನೆಗಳ ವಿವರ ಅನುಬಂದ– 1ರಲ್ಲಿ ಲಗತ್ತಿಸಿದೆ.

ರಾಜ್ಯ ಮಟ್ಟದ ಏಕಗಾವಕ್ಷಿ ಸಮಿತಿಯಿಂದ ಅನುಮೋದಿತ 84 ಯೋಜನೆಗಳು ಪ್ರಮುಖವಾಗಿ ಇಂಜಿನಿಯರಿಂಗ್, ಮಾಹಿತಿ ತಂತ್ರಜ್ಞಾನ, ಆಹಾರ ಸಂಸ್ಕರಣೆ, ಜವಳಿ, ಔಷಧಿ ಮತ್ತು ರಾಸಾಯನ. ಆಟೋಮೋಬೈಲ್, ಸಕ್ಕರೆ, ಪ್ಲಾಸ್ಟಿಕ್, ವಿದ್ಯುತ್‌ಚ್ಛಕ್ತಿ, ಉತ್ಪಾದನೆ, ಪ್ರವಾಸೋದ್ಯಮ ಮತ್ತು ಮೂಲ ಸೌಕರ್ಯ ಕ್ಷೇತ್ರಕ್ಕೆ ಸೇರಿವೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ. ಮೊದಲನೆಯದಾಗಿ ನನಗೆ ಇಂಗ್ಲೀಷ್‌ನಲ್ಲಿ ಉತ್ತರ ಕೊಟ್ಟಿದ್ದಾರೆ. ನಾನು ಕನ್ನಡದಲ್ಲಿ ಪ್ರಶ್ನೆ ಕೇಳಿದ್ದೇನೆ. ದಯಮಾಡಿ ನಾನು ಕನ್ನಡದಲ್ಲಿ ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಇಂಗ್ಲೀಷ್‌ನಲ್ಲಿ ಉತ್ತರ ಕೊಟ್ಟಿದ್ದಾರೆ. ಇದನ್ನು ಏನು ಮಾಡೋಣ ಅಂತ ತಾವು ಹೇಳಬೇಕು. ಈ ಉತ್ತರದ ಬಗ್ಗೆ ತಾವು ತಕ್ಷಣ ಮಂತ್ರಿಗಳಿಗೆ. ತಮ್ಮ ಪಟ್ಟಿ ಕಾರ್ಖಾನೆಗಳ ಪಟ್ಟಿ 28 ಕಾರ್ಖಾನೆಗಳ ಪಟ್ಟಿಯನ್ನು ಇಂಗ್ಲೀಷಿನಲ್ಲಿ ಒದಗಿಸಿದ್ದೀರಿ. ಮೊದಲು ಅದು ತೀರ್ಮಾನವಾಗಲಿ ನೀವು ಯಾವ ಭಾಷೆಯಲ್ಲಿ ಕೊಡುತ್ತೀರಿ ಅಂತ ತೀರ್ಮಾನವಾದ ಮೇಲೆ ನನ್ನ ಪ್ರಶ್ನೆಯನ್ನು ನಾನು ಮುಂದೆ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ. ತಪ್ಪಾಗಿದೆ ನಾನು ಕ್ಷಮೆ ಕೇಳುತ್ತೇನೆ. ಇನ್ನು ಮೇಲೆ ಕನ್ನಡದಲ್ಲೂ ಕಳುಹಿಸಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಈಗ ಏನು ಮಾಡೋಣ. ತಾವು ಇಂಗ್ಲೀಷ್‌ನಲ್ಲಿ ಕಳುಹಿಸಿಕೊಟ್ಟಿದ್ದೀರಿ. ಈಗ ಇದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನಮ್ಮ ಕಡೆಯಿಂದ ತಪ್ಪಾಗಿದೆ ಅದರ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಇನ್ನು ಮೇಲೆ ಕನ್ನಡದಲ್ಲಿ ಬರುವಂತೆ ಮಾಡುತ್ತೇನೆ. ನಿಮಗೊಬ್ಬರಿಗೆ ಅಂತ ಅಲ್ಲ. ಇಡೀ ಸದನದ ಸದಸ್ಯರಿಗೆ ನಾನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಕಳುಹಿಸಿದ್ದೇನೆ ನಮ್ಮ ಇಲಾಖೆಗೆ.

ಶ್ರೀ ವಾಟಾಳ್ ನಾಗರಾಜ್ :– ಈ ಸದನದಲ್ಲಿ ಕನ್ನಡಕ್ಕೆ ಈ ಪರಿಸ್ಥಿತಿಯಾದರೆ ಇನ್ನು ಇಡೀ ರಾಜ್ಯದಲ್ಲಿ ಕನ್ನಡದ ಪರಿಸ್ಥಿತಿ ಏನು?

ಅಧ್ಯಕ್ಷರು :– ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರಲ್ಲ. ಈಗ ಏನಾದರೂ ಪ್ರಶ್ನೆ ಇದ್ದರೆ ಕೇಳಿ ಇಲ್ಲದಿದ್ದರೆ ಮುಂದಿನ ದಿವಸ ಪ್ರಶ್ನೆ ಕೇಳಿ. ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಉತ್ತರ ಕೊಟ್ಟಿದ್ದಾರೆ ಮಾನ್ಯ ಅಧ್ಯಕ್ಷರೆ. ಅವರು ತಪ್ಪಾಯಿತು ಅಂತ ಒಪ್ಪಿಕೊಂಡರೆ ಕನ್ನಡ ಉದ್ಧಾರವಾಯಿತು ಅಂತಲೆ. ಈ ತರಹ ಆದರೆ ಹೇಗೆ?

ಅಧ್ಯಕ್ಷರು :– ಕೆಲವು ಸಲ ಏನಾಗುತ್ತದೆ ತಪ್ಪಾಗಿದೆ ಅಂತ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೆ. ಅವರಿಗೆ ಸಮಾಧಾನ ಇಲ್ಲ ಅಂದರೆ ನಾನು ಉತ್ತರವನ್ನು ಕನ್ನಡದಲ್ಲಿ ಕೊಟ್ಟಿದ್ದೇನೆ. ಉತ್ತರ ಕನ್ನಡದಲ್ಲಿದೆ ಅವರಿಗೆ ಕೊಟ್ಟಿರತಕ್ಕಂಥ ಪಟ್ಟಿ ಏನಿದೆ ಆ ಪಟ್ಟಿಯಲ್ಲಿ ಇಂಗ್ಲೀಷ್‌ನ್ನೂ ಕನ್ನಡದಲ್ಲಿ ತರ್ಜುಮೆ ಮಾಡಿ ಕೊಡಬೇಕಾಗಿತ್ತು. ಬಹಳಷ್ಟು ಹೆಸರುಗಳು ಬೈಯೋಟೆಕ್ ಅವು ಇವು ಎಲ್ಲ ಇಂಗ್ಲೀಷ್ ಹೆಸರುಗಳು ಇದ್ದುದ್ದರಿಂದ ಇಂಗ್ಲೀಷ್‌ನಲ್ಲಿರತಕ್ಕಂಥ ಪಟ್ಟಿಯನ್ನು ಕೊಟ್ಟಿದ್ದೇವೆ. ಉತ್ತರ ಕನ್ನಡದಲ್ಲಿ ಕೊಟ್ಟಿದ್ದೇವೆ. ಆ ಪಟ್ಟಿಯನ್ನು ಇಂಗ್ಲೀಷ್‌ನಲ್ಲಿ ಕೊಟ್ಟಿರುವುದು ತಪ್ಪಾಗಿದೆ. ಆದ್ದರಿಂದ ಈ ಪ್ರಶ್ನೆಯನ್ನು ಮುಂದೂಡಿ. ಕನ್ನಡೀಕರಣವಾದ ಮೇಲೆ ನಾನು ಉತ್ತರ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಈ ಹೆಸರುಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಆಗುವುದಿಲ್ಲವೇ ಅಂತ ನಾನು ಕೇಳುವುದು. ಈ ಪದಗಳ ಉಚ್ಚಾರಣೆ ಕನ್ನಡದಲ್ಲಿ ಇಲ್ಲವೇ? ಉಚ್ಚಾರಣೆಗೋಸ್ಕರ ಇಂಗ್ಲೀಷ್‌ನಲ್ಲಿ ಅಂತ ಹೇಳುತ್ತೀರಲ್ಲ ಕನ್ನಡದಲ್ಲಿ ಬರೆಯುವುದಕ್ಕೆ ಆಗುವುದಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ :– ತಪ್ಪಾಗಿದೆ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ. ಇವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ನಾನು ಕೇಳಿರತಕ್ಕಂಥಾದ್ದು ರಾಜ್ಯಕ್ಕೆ ಹೊರಗಡೆಯಿಂದ ಬಂದಿರತಕ್ಕಂಥ ಖಾಸಗೀ ಕಾರ್ಖಾನೆಗಳು ಎಷ್ಟು ಅಂತ. ಅದನ್ನು ನೇರವಾಗಿ ಹೇಳದೆ ಕೊನೆಯಲ್ಲಿ ಇಂಗ್ಲೀಷ್‌ನಲ್ಲಿ ಅದನ್ನು ಕೊಟ್ಟಿದ್ದಾರೆ. ಅವರು ಈಗ ಏನೋ ಹೇಳಿದ್ದಾರೆ ಅದರ ಬಗ್ಗೆ ನನಗೆ ಸಮಾಧಾನ ಇಲ್ಲ ಇರಲಿ. ಎಷ್ಟು ಖಾಸಗಿ ಕಾರ್ಖಾನೆಗಳು ಕರ್ನಾಟಕದಲ್ಲಿ ಬಂದಿವೆ ತಾವು ಕೊಟ್ಟಿರತಕ್ಕಂಥ 28 ಖಾಸಗಿ ಕಾರ್ಖಾನೆಗಳಲ್ಲಿ ಎಷ್ಟು ಉದ್ಯೋಗವನ್ನು ಸೃಷ್ಟಿ ಮಾಡಿದ್ದೀರಿ? ಈ ಉದ್ಯೋಗವನ್ನು ಕೊಡುವುದಕ್ಕೆ ನಿಮ್ಮ ನೀತಿ ಏನು ? ಎಷ್ಟು ಜನ ಸ್ಥಳೀಯರಿಗೆ ಉದ್ಯೋಗವನ್ನು ಕೊಡಬೇಕು ಎನ್ನತಕ್ಕಂಥ ಸರ್ಕಾರದ ಆದೇಶವನ್ನು ನೀಡಿದ್ದೀರಿ? ಇದರಿಂದ ಎಷ್ಟು ಜನ ಸ್ಥಳೀಯರಿಗೆ ಉದ್ಯೋಗ ಸಿಕ್ಕಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ ;– ಮಾನ್ಯ ಅಧ್ಯಕ್ಷರೇ ಗೌರವಾನ್ವಿತ ಸದಸ್ಯರಿಗೆ 1–4–2003 ರಿಂದ 2004ರ ಅವಧಿಯಲ್ಲಿ ಆಗಿರತಕ್ಕಂಥಾದ್ದು ಮಾತ್ರ ನಾನು ಕೊಟ್ಟಿರತಕ್ಕಂಥಾದ್ದು ಅದರ ಹಿಂದಿನ ಎರಡು ವರ್ಷಗಳ ಮಾಹಿತಿಯನ್ನು ಮಾತ್ರ ನಾನು ಕೊಟ್ಟಿದ್ದೇನೆಯೆ ಹೊರತು ಬಾಕಿ ವಿವರಗಳನ್ನು ನಾನು ತಮಗೆ ಕೊಟ್ಟಿಲ್ಲ. ಬಾಕಿ ವಿವರಗಳು ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ 21 ಸಾವಿರ ಜನಕ್ಕೆ ಉದ್ಯೋಗ ಸಿಕ್ಕಿದೆ. ಕಳೆದ ಎರಡು ವರ್ಷಗಳಲ್ಲಿ ನಾವು ಕ್ಲಿಯರ್ ಮಾಡಿರತಕ್ಕಂಥ ಪ್ರಾಜೆಕ್ಟ್‌ಗಳಲ್ಲಿ 23 ಸಾವಿರ ಜನಕ್ಕೆ ಕೆಲಸದ ಅವಕಾಶಗಳು ಆಗಿವೆ. 32 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿರತಕ್ಕಂಥಾದ್ದು. ಈಗ ನನಗೆ ಗೊತ್ತಿರುವ ಹಾಗೆ ಒಂದೆರಡು ಕ್ಷೇತ್ರಗಳನ್ನು ಬಿಟ್ಟರೆ ಬಾಕಿ ಎಲ್ಲಾ ಕ್ಷೇತ್ರಗಳಲ್ಲೂ ಸಹ ಶೇಕಡ 85–90ರಷ್ಟು ಭಾಗ ಕನ್ನಡಿಗರಿಗೆ ಉದ್ಯೋಗವನ್ನು ಕೊಟ್ಟಿದ್ದಾರೆ. ಆದರೂ ಈ ವಿಚಾರದಲ್ಲಿ ನನಗೆ ತೃಪ್ತಿ ಇಲ್ಲ. ನಾನು ಈಗಾಗಲೇ ಸದನದ ಹೊರಗಡೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ ಮತ್ತು ಸಚಿವ ಸಂಪುಟದಲ್ಲಿ ಇದಕ್ಕೋಸ್ಕರವೇ ಅಂತ ಹೇಳಿ ನಾನು ಒಂದು ವಿಶೇಷವಾದ ಪ್ರಸ್ತಾವನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಡಾಕ್ಟರ್ ಸರೋಜಿನಿ ಮಹಿಷಿ ವರದಿ ಇರಬಹುದು. ಇತರೆ ವರದಿಗಳು ಇರಬಹುದು ಕನ್ನಡದವರಿಗೆ ಎಲ್ಲಾ ಕ್ಷೇತ್ರದಲ್ಲೂ ಸಹ ಉದ್ಯೋಗಗಳು ಸಿಗಬೇಕು ಎನ್ನುವ ದೃಷ್ಟಿಯಿಂದಾಗಿ ವಿವಿಧ ಇಲಾಖೆಗಳಲ್ಲಿ ವಿವಿಧ ಕಾರ್ಖಾನೆಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ವಿವಿಧ ಭಾಗಗಳಲ್ಲಿ ಇದು ಆಗಿದೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಂಡು ಆಗದೇ ಇದ್ದರೆ

ಕ್ರಮ ತೆಗೆದುಕೊಳ್ಳುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಸಹ ಸರ್ಕಾರ ಈಗಾಗಲೇ ರಚನೆ ಮಾಡಿದೆ. ಆದರೆ ಸಭೆ ಇನ್ನೂ ನಡೆದಿಲ್ಲ. ಅಧಿವೇಶನದ ನಂತರ ನಡೆಯುತ್ತದೆ ನಾವು ಎಲ್ಲಾ ಕಡೆಗಳಲ್ಲೂ ಸಹ ಈ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಸಹ ಈ ವಿಚಾರದಲ್ಲಿ ನಾವು ಕಾಂಪ್ರಮೈಸ್ ಮಾಡಿಕೊಳ್ಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ ಡಾಕ್ಟರ್ ಸರೋಜಿನಿ ಮಹಿಷಿ ವರದಿ ಕೊಟ್ಟು ಎರಡೂವರೆ ದಶಕ. 25 ವರ್ಷ ಆಯಿತು. ಮಾನ್ಯ ಕೈಗಾರಿಕಾ ಸಚಿವರು ಸುಮಾರು 6 ತಿಂಗಳ ಹಿಂದೆ ಇದೇ ಸದನದಲ್ಲಿ ನಾನು ಸರೋಜಿನಿ ಮಹಿಷಿ ವರದಿಯನ್ನು ಜಾರಿ ಮಾಡುವ ಬಗ್ಗೆ ನಿಮ್ಮನ್ನೆಲ್ಲಾ ಕರೆದು ಮಾತುಕತೆ ಮಾಡುತ್ತೇನೆಂದು ಭರವಸೆ ಕೊಟ್ಟರು. ಇವತ್ತಿನವರೆಗೂ ಯಾರನ್ನು ಕರೆದಿಲ್ಲ. ಇವತ್ತಿನವರೆಗೂ ಇವರ ಭರವಸೆಯು ಈಡೇರಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಇದು ಹಕ್ಕುಚ್ಯುತಿಯಾಗುತ್ತದೆ. ಆದರೂ ನಾನು ಅಥವಾ ಮಾನ್ಯ ಸಚಿವರ ಒಂದು ಇದರಿಂದ ತರಬೇಕೇ ಬಿಡಬೇಕೆ ಎಂದು ನಾನು ಚಿಂತನೆ ಮಾಡುತ್ತಿದ್ದೇನೆ. ಈ ಸದನಕ್ಕೆ ಕೊಟ್ಟಂತಹ ಭರವಸೆ. 25 ವರ್ಷ ಆಯಿತು ಡಾಕ್ಟರ್ ಸರೋಜಿನಿ ಮಹಿಷಿ ವರದಿ ಕೊಟ್ಟು, ಇವರು ಹೇಳತಕ್ಕಂಥಾದ್ದು 25–26 ಸಾವಿರ ಜನಕ್ಕೆ ಉದ್ಯೋಗ ಕೊಟ್ಟಿದ್ದೇವೆಂದು ಹೇಳುತ್ತಾರೆ. ನೂರಕ್ಕೆ ತೊಂಬತ್ತೊಂಬತ್ತು ಭಾಗ ಸ್ಥಳೀಯರಿಗೆ ಅಂತ, ಇದು ಸತ್ಯಕ್ಕೆ ದೂರವಾದ ಮಾತು. ನೂರಕ್ಕೆ ತೊಂಬತ್ತೊಂಬತ್ತು ಭಾಗ ಹೊರಗಡೆಯವರಿಗೆ ಕೊಟ್ಟಿದ್ದಾರೆಯೇ ಹೊರತು ಕರ್ನಾಟಕದವರಿಗೆ ಕನ್ನಡಿಗರಿಗೆ ಕೊಟ್ಟಿಲ್ಲ. ಅದನ್ನು ಸ್ಪಷ್ಟವಾಗಿ ಅವರು ಹೇಳಬೇಕು, ಅಂಕಿಅಂಶ ಅವರ ಹತ್ತಿರ ಇಲ್ಲ, ಹೇಳಿ ಈಗ ಯಾವ ಯಾವ ಕಾರ್ಖಾನೆಯಲ್ಲಿ ಎಷ್ಟೆಷ್ಟು ಜನ ಕನ್ನಡಿಗರಿಗೆ ಉದ್ಯೋಗ ಕೊಟ್ಟಿದ್ದೇವೆ ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಿ ನೀವು. ಈ ಕರ್ನಾಟಕದಲ್ಲಿ ಒಂದು ದೊಡ್ಡ ದುರಂತ. ಕರ್ನಾಟಕದಲ್ಲಿ ಕಾರ್ಖಾನೆಗಳು ಬರುತ್ತಿವೆ. ಕನ್ನಡಗರಿಗೆ ಹುದ್ದೆ ಇಲ್ಲ. ಲಕ್ಷಾಂತರ ಜನ ಬೇರೆಯವರು ಬರುತ್ತಿದ್ದಾರೆ. ಅವರಿಗೆ ಉದ್ಯೋಗ ಆಗುತ್ತಿದೆ. ಮಹಾರಾಷ್ಟ್ರದಲ್ಲಿ ಕನ್ನಡಿಗರಿಗೆ ಇಲ್ಲ. ಕೇರಳದಲ್ಲಿ ಕನ್ನಡಿಗರಿಗೆ ಇಲ್ಲ. ಆಂದ್ರದಲ್ಲಿ ಕನ್ನಡಿಗರಿಗೆ ಇಲ್ಲ. ಕರ್ನಾಟಕದಲ್ಲೂ ಕನ್ನಡಿಗರಿಗೆ ಇಲ್ಲ. ಏನು ಪರಿಸ್ಥಿತಿ ಇದು. ಏನಾಗಬೇಕು ಇದರ ಹಣೆಬರಹ. ನಮ್ಮ ಸರ್ಕಾರದ ನೀತಿ ಏನು? 25 ವರ್ಷ ಆಯಿತು. ಸರೋಜಿನಿ ಮಹಿಷಿ ವರದಿ ಬಂದು. ತಾವು ಈಗ ಹೇಳುತ್ತಿದ್ದೀರಿ ನಾನು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. 12 ಉಪ ಸಮಿತಿ ಆಯಿತು ಇದಕ್ಕೆ. ಸರೋಜಿನಿ ಮಹಿಷಿ ವರದಿ ಕೊಟ್ಟ ಮೇಲೆ 12 ಉಪ ಸಮಿತಿಗಳು

ಆಗಿದೆ. ಇವತ್ತಿನವರೆಗೂ ಸರೋಜಿನಿ ಮಹಿಷಿ ವರದಿಯನ್ನು ಇವರು ಜಾರಿಗೆ ತಂದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ. ನಿಮಗೆ ಕಳಕಳಿ ಇದೆ. ಫಾರ್ಚುನೇಟ್‌ಲಿ ತಾವು ಈಗ ಒಂದು ಪ್ರಮುಖ ಇಲಾಖೆಯಲ್ಲಿದ್ದೀರಿ. ಇನ್ನು ಮುಂದೆ ಬರುವಂತಹ ಇಂಡಸ್ಟ್ರೀಗಳಿಗೆ ಒಂದು ಗೈಡ್‌ಲೈನ್ಸ್ ಮಾಡಿ. ಅವನು ಇಲ್ಲಿಗೆ ಬರುವುದಕ್ಕಿಂತ ಮುಂಚಿತವಾಗಿ ಈ ರೀತಿ ನೂರಕ್ಕೆ ಇಷ್ಟು ಭಾಗ ಕನ್ನಡಿಗರಿಗೆ ಉದ್ಯೋಗ ಸಿಗಲೇಬೇಕು. ಎಲ್ಲಾ ರೀತಿಯ ವ್ಯಕ್ತಿಗಳು ಅವರಿಗೆ ಬೇಕಾಗಿರುವಂತಹವರು ಕನ್ನಡಿಗರು ಸಿಗುತ್ತಾರೆ ಹೊರದೇಶಗಳಲ್ಲಿ ಹೋಗಿ ನಾವು ಪ್ರಮುಖ ಕ್ಷೇತ್ರಗಳಲ್ಲಿ ಕೆಲಸ ಮಾಡುವಾಗ ಇಲ್ಲಿ ಸಿಗುವುದಿಲ್ಲ ಎನ್ನುವುದು ಏನು ಇಲ್ಲ. ಇದು ಒಂದು ಎರಡನೆಯದು ಈಗಲಾದರೂ ಒಂದು ಏನಾದರೂ ಒಂದು ಟೈಮ್ ಬೌಂಡ್ ನಿಶ್ಚಿತವಾಗಿ ಮುಖ್ಯಮಂತ್ರಿಗಳನ್ನು ಕರೆದು ಮಾತನಾಡಿ ಅನೇಕ ವರ್ಷಗಳಿಂದ ಈ ಭರವಸೆಗಳು. ಸರೋಜಿನಿ ಮಹಿಷಿ ವರದಿ ಬಗ್ಗೆ ಚರ್ಚೆಗಳು ನಡೆದಿದೆ. ನಿಮ್ಮ ಕಾಲದಲ್ಲಿ ಆದರೂ ಕುಳಿತು ಮಾತನಾಡಿ ಅದನ್ನು ಜಾರಿಗೆ ತರುವುದಕ್ಕೆ ಏನಾದರೂ ಅಡ್ಡಿ ಆತಂಕಗಳು ಇದ್ದರೆ ಹೇಳಿ. ಇಲ್ಲದಿದ್ದರೆ ಅದನ್ನು ಜಾರಿಗೆ ತರುವಂತಹ ಪ್ರಯತ್ನ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೆ. ಎರಡು ವಿಚಾರಗಳಲ್ಲಿ ನಾನು ಬಹಳ ಸ್ಪಷ್ಟವಾಗಿ ನಿಲುವು ತೆಗೆದುಕೊಂಡಿದ್ದೇನೆ. ಈ ಸರ್ಕಾರದ ಕೈಗಾರಿಕಾ ಮಂತ್ರಿಯಾದ ಮೇಲೆ ಒಂದು ರಾಜ್ಯದಲ್ಲಿರತಕ್ಕಂಥ ಹಿಂದುಳಿದ ಪ್ರದೇಶಗಳು ಏನಿದೆ ಈ ಅಸಮತೋಲನ ದೃಷ್ಟಿಯಿಂದಾಗಿ ಡಾಕ್ಟರ್ ನಂಜುಂಡಪ್ಪನವರ ವರದಿ ಏನಿದೆ ಅದನ್ನು ಅನುಷ್ಠಾನಗೊಳಿಸಲೇಬೇಕು ಅಂತ ಹೇಳಿ ನನ್ನ ಇಲಾಖೆ ಮೊದಲನೇ ಇಲಾಖೆ. ಕೈಗಾರಿಕಾ ಇಲಾಖೆ ಮೊದಲನೇ ಇಲಾಖೆ. ಅದನ್ನು ಕಾರ್ಯಗತ ಮಾಡಲಿಕ್ಕೆ ಒಂದು ಆಕ್ಷನ್ ಪ್ಲಾನ್ ಒಂದು ರೋಡ್ ಮ್ಯಾಪ್ ಮಾಡಿ ಈ 77 ಹಿಂದುಳಿದ ಮತ್ತು ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಹ್ಯಾಂಕರ್ ಇಂಡಸ್ಟ್ರೀಗಳನ್ನು ತಂದು ಒಂದೂವರೆ ಲಕ್ಷ ಜನಕ್ಕೆ ಉದ್ಯೋಗವನ್ನು ಕೊಡುವ ದೃಷ್ಟಿಯಿಂದಾಗಿ ಕೈಗಾರಿಕಾ ವಿಕಾಸ ಯೋಜನೆಯನ್ನು ತಯಾರು ಮಾಡಿರತಕ್ಕಂಥಾದ್ದು.

77 ತಾಲ್ಲೂಕುಗಳಲ್ಲೂ ಸಹಿತ ವಿಶೇಷವಾದ ಕಾರ್ಯ ಯೋಜನೆಯನ್ನು ತಯಾರು ಮಾಡಿಸಿದ್ದೇನೆ. ಕೈಗಾರಿಕೆ ಇಲಾಖೆಯಿಂದ. ಎರಡನೆಯದಾಗಿ ಮಾನ್ಯ ವಾಟಾಳ್ ನಾಗರಾಜ್ ಹೇಳಿರುವುದು ನಿಜ. ಅವರು ಕೇಳಿಸಿಕೊಳ್ಳಲಿಲ್ಲ ಅಂತ

ಕಾಣುತ್ತದೆ ಕಳೆದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ಆಗಿರುವ ಪ್ರಗತಿ ಏನೆಂದರೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿ ರಚನೆಯಾಗಿದೆ. ಸರ್ಕಾರದ ಆಜ್ಞೆಯಾಗಿದೆ ಇದಕ್ಕೆ. ಸಭೆ ಕರೆದಿಲ್ಲ ಅವರು. ಸಭೆ ಕರೆದ ಮೇಲೆ ಸಂಬಂಧಪಟ್ಟ ಎಲ್ಲ ಮುಖಂಡರನ್ನು ನಾವು ಕರೆಸುತ್ತೇವೆ. ಇದಿನಬ್ಬ ವಾಟಾಳ್ ನಾಗರಾಜ್‌ರವರುಗಳನ್ನು ಕರೆಸುತ್ತೇವೆ. ಆಸಕ್ತಿ ಇರುವ ಶಾಸಕರನ್ನು ಕರೆಸುತ್ತೇವೆ. ಅವರ ಅಭಿಪ್ರಾಯಗಳನ್ನು ಪಡೆದಿದ್ದೇವೆ. ಇದರಲ್ಲಿ ಒಟ್ಟು ಪಾರದರ್ಶಿಕತೆ ಇದೆ. ಇಲ್ಲಿ ನಾವು ಯಾರನ್ನೂ ಡಿಫೆಂಡ್ ಮಾಡಿಕೊಳ್ಳುವ ಪ್ರಶ್ನೆ ಇಲ್ಲ. ಇದರಲ್ಲಿ ರಾಜಿ ಇಲ್ಲ. ಯಾರೆಷ್ಟೇ ದೊಡ್ಡವರಾಗಿರಲಿ ನಾವು ಜಮೀನು ಕೊಟ್ಟಿದ್ದೇವೆ ನೀರು ವಿದ್ಯುತ್ ಕೊಟ್ಟಿದ್ದೇವೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪ ಹೇಳಿದಂತೆ ನಮ್ಮಲ್ಲಿ ಸಾಕಷ್ಟು ಮಾನವ ಸಂಪನ್ಮೂಲ ಸಿಗುತ್ತದೆ. ನಾವು ಯಾವುದರಲ್ಲಿ ಸಹಿತ ಕಡಿಮೆ ಇಲ್ಲ. ಇದನ್ನು ಅನುಷ್ಠಾನಗೊಳಿಸಲೇಬೇಕು. ಅಧಿವೇಶನ ನಂತರ ಇದನ್ನು ನಾವು ಒಂದು ರಿವ್ಯೂ ಮಾಡಿ ಯಾವ್ಯಾವ ಕಡೆ ಆಗಿಲ್ಲ. ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ತಮ್ಮ ಸಲಹೆಯನ್ನು ಸಹಿತ ಗಮನದಲ್ಲಿಟ್ಟುಕೊಂಡು ಅದನ್ನು ಅನುಷ್ಠಾನಗೊಳಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಇದು ಪ್ರತಿ ಸಾರೀನೂ ಭರವಸೆ ಆಗುತ್ತಾ ಇದೆ. ಕಾರ್ಯಗತವಾಗಲಿಲ್ಲ ಉಪಸಮಿತಿ ಎಷ್ಟು ಸಾರಿ? ಸ್ವಾಮಿ ನಿಮ್ಮ ಸರ್ಕಾರ ಬಂದ ಮೇಲೆ ಉಪಸಮಿತಿ ಆಯಿತು. ಕೃಷ್ಣ ಅವರ ಸರ್ಕಾರ ಇದ್ದಾಗ ಉಪಸಮಿತಿ ಆಯಿತು. ಜೆ.ಹೆಚ್. ಪಟೇಲರ ಕಾಲದಲ್ಲಿ ಉಪಸಮಿತಿ ಆಯಿತು. ಕಾರ್ಯ ಏನಾಯಿತು ಹೇಳಿ. ಈ ಸದನಕ್ಕೆ ಮಸೂದೆ ತನ್ನಿ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಆಯ್ತು. ನಾನು ಸುಮ್ಮನೆ ಕೂತುಕೊಂಡಿಲ್ಲ ಸ್ವಾಮಿ. 2004 ಡಿಸೆಂಬರ್. ನಾನು ಕೈಗಾರಿಕಾ ಸಚಿವನಾಗಿದ್ದ ಸಂದರ್ಭದಲ್ಲಿ ಎಲ್ಲರಿಗೂ ಸಹಿತ ನಾವೊಂದು ಸುತ್ತೋಲೆ ಕಳಿಸಿ ಜಿಲ್ಲಾವಾರು ಎಷ್ಟೆಷ್ಟು ಕನ್ನಡಿಗರಿಗೆ ಸಿಕ್ಕಿದೆ ಎಂಬ ವರದಿಯನ್ನು ತರಿಸಿಕೊಂಡಿದ್ದೇನೆ. ಈಗ ಬೆಂಗಳೂರು ನಗರಜಿಲ್ಲೆಯಲ್ಲಿ ಎಷ್ಟು ಘಟಕಗಳಿವೆ ಎಷ್ಟು ಅನುಷ್ಠಾನವಾಗಿದೆ ಅಂತ ವರದಿ ತರಿಸಿಕೊಂಡಿದ್ದೇನೆ. ಉದಾಹರಣೆಗೆ ಬೆಂಗಳೂರು ನಗರದಲ್ಲಿ ಅಂದರೆ ಬೆಂಗಳೂರು ಸಿಟಿ ಬರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ 1,54,000 ಕನ್ನಡಿಗರಿಗೆ ಉದ್ಯೋಗ ಸಿಕ್ಕಿದೆ. 1730 ಕನ್ನಡೇತರರಿಗೆ ಸಿಕ್ಕಿದೆ. ಬೆಂಗಳೂರು ಗ್ರಾಮಾಂತರದಲ್ಲಿ 6379 ಕನ್ನಡಿಗರಿಗೆ. ಇತರರಿಗೆ 490 ಜನಕ್ಕೆ ಸಿಕ್ಕಿದೆ. ಒಟ್ಟಿನಲ್ಲಿ ಬೆಂಗಳೂರು ನಗರ 98 ಪರ್ಸೆಂಟ್ ಬೆಂಗಳೂರು ಗ್ರಾಮಾಂತರ 92 ಪರ್ಸೆಂಟ್. ಬೆಳಗಾಂ 98 ಪರ್ಸೆಂಟ್. ಬಳ್ಳಾರಿ 87 ಪರ್ಸೆಂಟ್.

ಹಾಸನ ನೂರಕ್ಕೆ ನೂರು. ತುಮಕೂರು 96, ಕಾರವಾರ 98, ಚಿಕ್ಕಮಗಳೂರು ಮಾತ್ರ 75, ಗದಗ 100, ದಾವಣಗೆರೆ 99.65, ಹೀಗೆ ಆಗಿರುವುದನ್ನು ತರಿಸಿಕೊಳ್ಳುವುದರ ಜೊತೆಗೆ ಸರೋಜಿನಿ ಮಹಿಷಿ ವರದಿ ಪ್ರಕಾರವಾಗಿ ಎ ವರ್ಗಕ್ಕೆ ಶೇಕಡ 65 ಮೀಸಲಿಡಬೇಕು. ಬಿ ವರ್ಗಕ್ಕೆ ಶೇಕಡ 80, ಸಿ ಮತ್ತು ಡಿ ವರ್ಗಕ್ಕೆ ಶೇಕಡ ನೂರರಷ್ಟು ಕನ್ನಡಿಗರಿಗೆ ಸಿಗಬೇಕು ಎಂಬ ಆಜ್ಞೆಯನ್ನು ನಾನು ಕಳಿಸಿದ್ದೇನೆ. ಇದನ್ನು ಅನುಷ್ಠಾನ ಮಾಡಲು ನಾನು ಪ್ರಾಮಾಣಿಕವಾಗಿ ಪ್ರಯತ್ನಪಡುತ್ತಿದ್ದೇನೆ. ಇದರಲ್ಲಿ ಅವರು ಹೇಳಿರುವುದರಲ್ಲಿ ಸತ್ಯಾಂಶ ಇದೆ ಇಲ್ಲ ಎಂದಲ್ಲ. ಮಾಹಿತಿ ತಂತ್ರಜ್ಞಾನ ಮತ್ತು ಬಯೋ ಟೆಕ್ನಾಲಜೀಸ್ ಇಂದ ನಾನು ಮಾಹಿತಿ ತರಿಸಿಕೊಂಡಿಲ್ಲ. ನನಗೆ ಸಂಬಂಧಪಟ್ಟ ಇಲಾಖೆ ಅಲ್ಲ ಅಂತ. ಇವನ್ನೆಲ್ಲ ತರಿಸಿಕೊಳ್ಳಬೇಕು. ಬೇರೆ ಬೇರೆ ಇಂಡಸ್ಟ್ರೀಸ್‌ಗಳಿವೆ, ಬೇರೆಬೇರೆ ಟೆಕ್ನಾಲಜೀಸ್ ಇವೆ. ಅವುಗಳಿಂದ ವರದಿ ತರಿಸಿಕೊಳ್ಳಬೇಕು ಅಂತಲೇ ನಾನು ಹೇಳುವುದಕ್ಕಿಂತ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಅದಕ್ಕೆ ಹೆಚ್ಚಿನ ತೂಕ ಬರುತ್ತದೆ ಅಂತ ಅವರ ಅಧ್ಯಕ್ಷತೆಯಲ್ಲಿ ಒಂದು ಸ್ಟಾಂಡಿಂಗ್ ಕಮಿಟಿ ಮಾಡಿಸಿದ್ದೇವೆ. ಅದು ತುಂಬಾ ಬಲಶಾಲಿಯಾದ ಸಚಿವ ಸಂಪುಟ ಉಪಸಮಿತಿ. ಅವರು ಕೊಡುವ ನಿರ್ದೇಶನವನ್ನು ಅದು ಇಂಪ್ಲಿಮೆಂಟ್ ಮಾಡುತ್ತೇನೆ. ಒಂದು ಹಿಯರಿಂಗ್ ಸಹಿತ ನಾನು ಮಾಡಿಸುತ್ತೇನೆ.

ಅಧ್ಯಕ್ಷರು : ನಾಗರಾಜ್ ಅವರೇ ಇದರ ಬಗ್ಗೆ ಹೆಚ್ಚಿನ ಚರ್ಚೆ ಏನಾದರೂ ಅಗತ್ಯ ಇದ್ದರೆ ಬೇರೆ ನಿಯಮದಡಿ ನೋಟಿಸ್ ಕಳಿಸಿ ನಾನು ಅವಕಾಶ ಕೊಡುತ್ತೇನೆ. ಮುಂದಿನ ಪ್ರಶ್ನೆ ಪುಟ್ಟೇಗೌಡರದು.

ಶ್ರೀ ವಾಟಾಳ್ ನಾಗರಾಜ್ : ನಿಜವಾಗೂ ನೋವಾಗುತ್ತಿದೆ. ಇದು ಸರಿಯಲ್ಲ ಈ ರಾಜ್ಯಕ್ಕೆ ಬಹಳ ಅನ್ಯಾಯವಾಗುತ್ತಾ ಇದೆ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಸಭಾತ್ಯಾಗ ಮಾಡುವರು)

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ವಾಟಾಳ್ ನಾಗರಾಜ್‌ರವರು ಕನ್ನಡಕ್ಕೆ ದ್ರೋಹ ಮಾಡಿದ್ದೇನೆ ಎಂದರು. ಅದು ದಾಖಲೆಗೆ ಹೋಗಬಾರದು. ಅದು ಪ್ರೆಸ್‌ಗೆ ಹೋಗುತ್ತದೆ ಸ್ವಾಮಿ ಇಷ್ಟೆಲ್ಲಾ ನಾನು ಪ್ರಾಮಾಣಿಕವಾಗಿ ಮಾಡಿರುವವನಿಗೆ ನೀವು ಬೆರಳು ತೋರಿಸಿ ಕನ್ನಡಕ್ಕೇ ದ್ರೋಹ ಮಾಡಿದ್ದೀರಾ ಅಂತ ಹೇಳಿದರೆ, ನಾಳೆ ಪತ್ರಿಕೆಗಳಲ್ಲಿ ವರದಿಯಾದರೆ ನನಗೆ ಮರ್ಯಾದೆ ಎಲ್ಲಿ ಬರುತ್ತದೆ.

ಅಧ್ಯಕ್ಷರು : ಅದನ್ನು ನೋಡಿ ಕಡತದಿಂದ ತೆಗೆಸಿಹಾಕುತ್ತೇನೆ.